ಶ್ರೀ ಕೆ. ಬಿ. ಮಂಜಪ್ಪ.—ಈ ರಸ್ತೆಯನ್ನು ಈ ವರ್ಷದಲ್ಲೇ ಪೂರ್ತಿ ಮುಗಿಸಲಾಗುವುದೆಂದು ಭರವಸೆ ಕೊಡುವಿರಾ ?

ಶ್ರೀ ಡಿ. ದೇವರಾಜ ಅರಸ್.—ಈ ವರ್ಷದಲ್ಲಿ ಕಾಮಗಾರಿಯನ್ನು ಪ್ರಾರಂಭ ಮಾಡಿ, ಸುಮಾರು ಐವತ್ತು ಸಾವಿರ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಲಾಗುವುದು. ಮುಂದಿನ ವರ್ಷ ರಸ್ತೆ ಕಾಮಗಾರಿಯನ್ನು ಪೂರೈಸಲಾಗುವುದು.

ಶ್ರೀ ಕೆ. ಬಿ. ಮಲ್ಲಪ್ಪ.—ಈ ಕಾಮಗಾರಿಗೆ ತಗಲುವ ಅಂದಾಜು ವೆಚ್ಚ ಎಷ್ಟು ? ಅಂದಾಜು ವೆಚ್ಚ ಮಂಜೂರಾಗಿದೆಯೆ ? ಮತ್ತು ಟೆಂಡರ್ ಕರೆಯಲಾಗಿದೆಯೆ ?

ಶ್ರೀ ಡಿ. ದೇವರಾಜ ಅರಸ್.—ಅಂದಾಜು ವೆಚ್ಚ ಮಂಜೂರಾಗಿದೆ. ಮಂಜೂರಾಗದೆ ಕೆಲಸವನ್ನು ಹೇಗೆ ತೆಗೆದುಕೊಳ್ಳುವುದಕ್ಕಾಗುತ್ತದೆ ?

PWD Gangmen in the State

59. SRI K. RAMBHAT (Puttur).—Will the Chief Minister be pleased to state :—

(a) the number of gangmen working in the Public Works Department in each district of the state ;

(b) their maximum and minimum strength during a year ;

(c) the salary paid to the gangmen and whether the salary is being paid as daily wages or as monthly salary ;

(d) whether there is a proposal before the Government to treat the Gangmen as Government employees ?

SRI D. DEVARAJ URS (Chief Minister).—

(a)—

Shimoga	658	Gulbarga	292
Chitradurga	708	Bidar	127
Mysore	441	Dharwar	1013
Mandya	327	Karwar	1228
Belgaum	996	Bangalore	620
Bijapur	1139	Tumkur	745
South Kanara	600	Raichur	524
Coorg	351	Bellary	74
Hassan	624	Kolar	632
Chikkamagalur	430		

(b) Maximum ... 12,082
Minimum ... 11,276

(c) The Gangmen are paid daily wages ranging from Rs. 4.25 to Rs. 6.00. The salary is being paid on daily wage basis.

(d) Yes.

ಶ್ರೀ ಕೆ. ರಾಮಯ್ಯಟ್ -- ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ಕಳೆದ ೧೯೬೦ ತಾರೀಖಿನ ದಿವಸ ಕೂಡ ಸಭೆಯಲ್ಲಿ ಪ್ರಸ್ತಾಪಕ್ಕೆ ಬಂದಿತ್ತು. ಈ ಪ್ರಶ್ನೆ ಏಥಾನ ಸಭೆಗೆ ಬಂದ ತಾಗಾಯಿನ್ನು ಆರ್ಜಾಸನೆಯನ್ನು ಪಡೆಯುತ್ತಿದೆ ಹಿಂಪೆ ಲೋಕೋಪಯೋಗಿ ಸಚಿವರಾಗಿದ್ದ ಮಾನ್ಯ ಬಂಗಾರಪ್ಪನವರೂ ಸಹ ಆರ್ಜಾಸನೆ ನೀಡಿದ್ದರು. ಬೇಗೆ ಆರ್ಜಾಸನೆಗಳು ಆರ್ಜಾಸನೆಗಳಾಗಿಯೇ ಉಳಿಯುತ್ತಿವೆಯೇ ಹೊರತು, ಕಾರ್ಯರೂಪಕ್ಕೆ ಬಾಗುತ್ತಿಲ್ಲ. ಆದುದರಿಂದ, ಗ್ಯಾಂಗ್‌ಮೆನ್‌ಗಳನ್ನು ಸರ್ಕಾರಿ ನೌಕರರೆಂದು ಪರಿಗಣಿಸುವ ಬಗ್ಗೆ ಏನು ನಿರ್ದಿಷ್ಟ ಧೋರಣೆಯನ್ನು ತಿಳಿಯಿತಾ ?

ಶ್ರೀ ಡಿ. ದೇವರಾಜ ಅರಸ್ -- ಇದು ಅಷ್ಟು ಸುಲಭ ವಿಚಾರದಲ್ಲ. ಇಲ್ಲಿನವರಿಗೆ ಕೊಟ್ಟರೆ ತಾತ್ಸಾರ ವಾಗಿ ಬೇರೆಯವರಿಗೆ ಕೊಡಬೇಕಾದ ಪ್ರಶ್ನೆ ಬರುತ್ತದೆ. ಇದು ಕೇವಲ ಹತ್ತೋ ಇಪ್ಪತ್ತೋ ಜನರ ಪ್ರಶ್ನೆಯಲ್ಲ; ಲಕ್ಷಾಂತರ ರೂಪಾಯಿ ವಿಚಾರ ಮಾಡುವ ವಿಚಾರವಾಗಿದೆ. ಹೀಗಾಗಿ ಕೊರತೆ ಇರುವುದರಿಂದ ಸಧ್ಯದಲ್ಲಿ ಈ ಪ್ರಶ್ನೆಯನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಈಗಾಗಲೇ ಹೇಳಿದ್ದೇನೆ. ಈ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹಿಂದೆಯೂ ಕೂಡ ಹೇಳಿದ್ದೇವೆ, ಈಗಲೂ ಹೇಳುತ್ತೇವೆ.

ಶ್ರೀ ಕೆ. ರಾಮಯ್ಯಟ್ -- ಕೇರಳ ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ಗ್ಯಾಂಗ್‌ಮನ ಗಳನ್ನು ಸರ್ಕಾರಿ ನೌಕರರೆಂದು ಪರಿಗಣಿಸಿ ಅವರಿಗೆ ಸರ್ಕಾರಿ ನೌಕರರಿಗೆ ಕೊಡುವಂತೆ ಸಂಬಳವನ್ನು ಕೊಡುತ್ತಿದ್ದಾರೆ. ಅದೇ ರೀತಿಯ ಸೂತ್ರವನ್ನು ನಮ್ಮ ರಾಜ್ಯದಲ್ಲೂ ಅಳವಡಿಸಿಕೊಳ್ಳಲಾಗುವುದೇ ?

ಶ್ರೀ ಡಿ. ದೇವರಾಜ ಅರಸ್ -- ಕೇರಳವನ್ನೂ ಮತ್ತು ನಮ್ಮ ಕರ್ನಾಟಕವನ್ನು ಹೋಲಿಸುವುದು ಸರಿಯಲ್ಲ.

ಶ್ರೀ ಬಿ.ವಿ. ಕಕ್ಕಿಲಾಯ -- ಹಿಂದೆ ಸರ್ಕಾರದವರು ಆರ್ಜಾಸನೆ ಕೊಟ್ಟ ಹಾಗೆ, ಲೋಕೋಪ ಯೋಗಿ ಇಲಾಖೆಯ ಕಾರ್ಯದರ್ಶಿಯವರು ಮುಖ್ಯ ಇಂಜಿನಿಯರ್‌ರವರಿಗೆ ಪತ್ರ ಬರೆದು, ಇನ್ನು ಐದು ವರ್ಷದೊಳಗೆ ಎಲ್ಲ ಗ್ಯಾಂಗ್‌ಮನ್‌ಗಳನ್ನೂ ಖಾಯಂ ಮಾಡಲು ಸರ್ಕಾರ ತೀರ್ಮಾನ ಮಾಡಿದೆ; ಅದನ್ನು ಯಾವ ರೀತಿಯಲ್ಲಿ ಮಾಡಬೇಕು ಮತ್ತು ಒಂದೊಂದು ವರ್ಷದಲ್ಲಿ ಎಷ್ಟೆಷ್ಟು ಕೆಲಸಗಾರರನ್ನು ಹಾಗೆ ಮಾಡಬೇಕೆನ್ನುವ ಬಗ್ಗೆ ಇನ್ನು ಪದಿನೈದು ದಿವಸಗಳೊಳಗಾಗಿ ಮಾಹಿತಿಯನ್ನು ಕಳುಹಿಸಿಕೊಡ ಬೇಕೆಂದು ಕೇಳಿದ್ದಾರೆ. ಆದರ ಪ್ರಕಾರ ಸರ್ಕಾರಕ್ಕೆ ಮಾಹಿತಿ ಬಂದಿದೆಯೇ? ಬಂದಿದ್ದರೆ, ಸರ್ಕಾರ ಆ ಬಗ್ಗೆ ಏನು ಕ್ರಮ ಕೈಗೊಂಡಿದೆ?

ಅಲ್ಲದೆ, ೧೯೭೪ನೇ ನವೆಂಬರ್ ೨೧ರಂದು ಹೊರಡಿಸಿದ ಕರ್ನಾಟಕ ರಾಜ್ಯಪತ್ರದ ೪ನೇ ಭಾಗದಲ್ಲಿ ಕನಿಷ್ಠ ವೇತನ ಎಷ್ಟಿರಬೇಕೆಂಬ ಬಗ್ಗೆ ಪ್ರಕಟಣೆ ಹೊರಡಿಸಿದ್ದಾರೆ. ಅದರ ಪ್ರಕಾರ ಇಂತಹ ಕೆಲಸಗಾರ ರಿಗೆ ಬೆಂಗಳೂರು ಮತ್ತು ಮಬ್ಬಳ್ಳಿ-ಧಾರವಾಡ ನಗರಸಭೆ ವ್ಯಾಪ್ತಿಯಲ್ಲಿ ದಿನಗೂಲಿ ಎಂಟು ರೂಪಾಯಿ ಗಳಾಗಿಯೂ, ಮಂಗಳೂರಿನಂತಹ ವ್ಯಾಪ್ತಿಯಲ್ಲಿ ಏಳು ರೂಪಾಯಿಗಳಾಗಿಯೂ ಮತ್ತು ಇತರ ಕಡೆಗಳಲ್ಲಿ ಆರು ರೂಪಾಯಿಗಳಾಗಿಯೂ ನಿಗದಿ ಮಾಡಲಾಗಿದೆ. ಆದರೆ, ಬೆಂಗಳೂರು ನಗರ ಸಭೆ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕೇವಲ ೪-೫೫ ರೂಪಾಯಿಗಳನ್ನು ಕೊಡುವಾಗುತ್ತಿದೆಯೇ ಹೊರತು, ಹೊರಡಿಸಿರುವ ಪ್ರಕಟಣೆಯಂತೆ ದಿನಗೂಲಿಯನ್ನು ಕೊಡುತ್ತಿಲ್ಲ. ಇದಕ್ಕೆ ಏನಾದರು ಹೊಣೆ? ನಿಗದಿ ಪಡಿಸಿದ ದರದಲ್ಲಿ ದಿನಗೂಲಿಯನ್ನು ಕೊಡದೆ ಇರುವ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಂಡು ಅವರನ್ನು ಏತಕ್ಕೆ ಶಿಕ್ಷೆಗೊಳಪಡಿಸಬಾರದು? ಅಥವಾ ಇಂಪ್ಲೈಯರ್ ವಿರುದ್ಧ ಕ್ರಮ ಏತಕ್ಕೆ ತೆಗೆದುಕೊಳ್ಳಬಾರದು?

ಶ್ರೀ ಡಿ. ದೇವರಾಜ ಅರಸ್—ಈ ವಿಚಾರವನ್ನು ವೇರೆಯೆ ಯಾವ ಕಾನೂನು ಪ್ರಕಾರ ಕೊಡಬೇಕಾಗಿದ್ದರೆ, ಕೊಡಿಸುತ್ತೇನೆ.

MR. SPEAKER.—Questions are over.